ಶ್ರೀ ಆಂಜನಮೂರ್ತಿ: ಮನವಿಯನ್ನು ಮಾಡಿಕೊಳ್ಳಲಾಗಿದೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಎಲ್ಲಾ ಶಾಸಕರದು, ಅವರನ್ನು ಕೇಳಿ ಅವರು ಸಜೆಸ್ಟ್ ಮಾಡಿದ ಜಾಗಗಳಲ್ಲಿ ಮಾಡುತ್ತೀರಾ, ಇಲ್ಲವೇ ಹೇಳಿ, ಅವರೊಬ್ಬರದನ್ನು ಸರಿಪಡಿಸಿದರೆ ಇಲ್ಲಿರುವವರಿಗೆಲ್ಲಾ ಸಮಾಧಾನವಾಯಿತೆ?

ಶ್ರೀ ಸಿ.ಎಂ.ಉದಾಸಿ: ಮಾಧುಸ್ವಾಮಿಯವರೆ, ಈಗ ಬಂದಿರುವುದೆ, ಶ್ರೀನಿವಾಸ ಗೌಡರು, ನೀವು, ಹೀಗೆ ಎರಡು ಮೂರು ಜನರದು.

ಶ್ರೀ ಕೆ.ಜಯಪ್ರಕಾಶ ಹೆಗ್ಡೆ: ನಾವು ನೇರವಾಗಿ ಗ್ರಾಮೀಣಾಭಿವೃದ್ಧಿ ಸಚಿವರಿಗೆ ಕೊಡುತ್ತೇವೆ.

ಶ್ರೀ ಸಿ.ಎಂ.ಉದಾಸಿ: 8ನೇ ತಾರೀಖಿನ ದಿವಸ ಒಂದು ಸಭೆಯನ್ನು ಕರೆದು ಚರ್ಚಿಸಿ ಸರಿಪಡಿಸುವ ಕೆಲಸವನ್ನು ಮಾಡುತ್ತೇನೆ.

ಅಧ್ಯಕ್ಷರು: ಒಂದು ಸಭೆಯನ್ನು ಕರೆದು ತೀರ್ಮಾನ ಮಾಡಿ ಸ್ವಾಮಿ.

ಶ್ರೀ ಕೆ.ಶ್ರೀನಿವಾಸ ಗೌಡ: ಅಧ್ಯಕ್ಷರೆ, ನನ್ನದು ಶೂನ್ಯ ವೇಳೆಯಲ್ಲೆ ಇರುವುದು.

ಅಧ್ಯಕ್ಷರು: ಶೂನ್ಯ ವೇಳೆಯದನ್ನೆ ಅಲ್ಲಿ ತಂದು ಕೊಡಬೇಕು ಸ್ವಾಮಿ, ಇಲ್ಲಿ ಎಲ್ಲಾ ತಂದು ಕೊಟ್ಟು ಬಿಟ್ಟರೆ ಹೇಗೆ? ಕುಳಿತು ಕೊಳ್ಳಿ.

ಶ್ರೀ ಸಿ.ಟಿ.ರವಿ: ಅಧ್ಯಕ್ಷರೆ, ಜುಲೈ 1ನೇ ತಾರೀಖಿನಿಂದ ರಾಜ್ಯದಲ್ಲಿ ಸಾರಾಯಿ ಮಾರಾಟವನ್ನು ನಿಷೇಧ ಮಾಡಲಾಗಿದೆ.

ಅಧ್ಯಕ್ಷರು: ಈಗ ಶ್ರೀರಾಮರೆಡ್ಡಿಯವರು ಮಾತನಾಡುತ್ತಾರೆ, ನಂತರ ನಿಮಗೆ ಅವಕಾಶ ಕೊಡುತ್ತೇನೆ.

(7) ವಿಷಯ: ಬೆಂಗಳೂರಿನ ಕಸದ ರಾಶಿಯಲ್ಲಿ ಭ್ರೂಣಗಳು ಪತ್ತೆಯಾಗಿರುವ ಬಗ್ಗೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಕಸದ ರಾಶಿಯಲ್ಲಿ ಭ್ರೂಣಗಳ ಪತ್ತೆ ಎಂದು ಇವತ್ತಿನ ಪತ್ರಿಕೆಯಲ್ಲಿ ಆಘಾತಕಾರಿ ಸುದ್ದಿ ಬಂದಿದೆ. ಈ ಭ್ರೂಣ ಎನ್ನುವ ಪ್ರಶ್ನೆ ನಮಗೆ ಬಂದ ತಕ್ಷಣ ಉತ್ತರ ಪ್ರದೇಶದಲ್ಲಿ

ನಡೆದ ಘಟನೆಗಳು ಜ್ಞಾಪಕವಾಗುತ್ತದೆ. ಇದೇ ರೀತಿಯಲ್ಲಿ ಬೆಂಗಳೂರು ನಗರದಲ್ಲೇನಾದರೂ ನಡೆಯುತ್ತಿದೆಯೆ? ನಡೆಯುತ್ತಿದ್ದರೆ, ಇದನ್ನು ತಡೆಯುವುದಕ್ಕೆ ಸರ್ಕಾರವೇನಾದರೂ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿದೆಯೆ? ಏಕೆಂದರೆ, ಸುಮಾರು 21 ಭ್ರೂಣಗಳು ಒಂದೇ ಕಡೆ ಬೆಂಗಳೂರಿನ ಜಕ್ಕರಾಯನ ಕೆರೆಯ ಹತ್ತಿರ ಹಾಕಿ ಹೋಗಿರುವುದು ಸಿಕ್ಕಿದೆ, ಇದೊಂದು ದಾರುಣವಾದ ಘಟನೆ, ಅದೂ ಕಸದ ತೊಟ್ಟಿಗೆ ಹಾಕಿ ಹೋಗಲಾಗಿದೆ. ಅದನ್ನು ಕೆಲವರು ಪ್ರತ್ಯಕ್ಷವಾಗಿ ನೋಡಿದ್ದಾರೆ. ಯಾರೊ ಬಸ್ಸಿನಲ್ಲಿ ಬಂದು ಒಂದು ಚೀಲವನ್ನು ಎಸೆದು ಅಲ್ಲಿ ಎಸೆದು ಹೋಗಿರುವುದನ್ನು ಪ್ರತ್ಯಕ್ಷವಾಗಿ ನೋಡಿದ್ದಾರೆ. ಅದನ್ನು ನೋಡುವುದಕ್ಕೆ ಹೋದಾಗಲೆ, ಅದರಲ್ಲಿ 21 ಸತ್ತ ಸಣ್ಣ ಶಿಶುಗಳ ಭ್ರೂಣಗಳು ಗೊತ್ತಾಗಿರುವುದು. ಇದು ಬೆಂಗಳೂರು ಸೇರಿದಂತೆ ಇಡೀ ಕರ್ನಾಟಕ ರಾಜ್ಯದಲ್ಲಿ ನಾವು ತಲೆ ತಗ್ಗಿಸುವಂಥ ವಿಚಾರವಾಗಿದೆ. ಇದು ಆಕಸ್ಮಿಕವಾಗಿ ನಡೆದಿರುವ ಘಟನೆಯಲ್ಲ. ಆಕಸ್ಮಿಕವಾಗಿದ್ದರೆ 1–2 ಸಿಗುವುದಕ್ಕೆ ಸಾಧ್ಯ ಇತ್ತು. 21 ಒಂದೇ ಕಡೆ ಪತ್ತೆಯಾಗಿದೆ ಎಂದರೆ, ಇದರ ಹಿಂದೆ ಮಹತ್ತರವಾದ. ಅಮಾನವೀಯವಾದಂಥ ಏನೋ ಒಂದು ಜಾಲ ನಡೆಯುತ್ತಿದೆ ಎಂಬುದು ನಾವೆಲ್ಲರೂ ಅನುಮಾನ ಪಡುವ ಸ್ಥಿತಿಗೆ ತಂದು ಇಟ್ಟಿದೆ. ಆದುದರಿಂದ ಈ ಜಾಲ ಬೆಂಗಳೂರು ನಗರದಲ್ಲಿ ಬಹಳ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದೆ, ಇದನ್ನು ಪತ್ತೆ ಹಚ್ಚುವ ಕೆಲಸವನ್ನು ಇನ್ನು ಸರ್ಕಾರ ಮಾಡಿಲ್ಲ. ಇಂಥ ಘಟನೆಗಳು ಆಗಾಗ ಮರುಕಳಿಸುತ್ತಿದೆ. ಜವಾಬ್ದಾರಿ ಸ್ಥಾನದಲ್ಲಿರುವ ಸರ್ಕಾರವಾಗಿರಬಹುದು, ನಾವು ಸೇರಿದಂತೆ ನಾಗರೀಕ ಸಮಾಜ ತಲೆ ತಗ್ಗಿಸುವಂಥ ಪರಿಸ್ಥಿತಿಯನ್ನು ನೋಡುತ್ತಿದ್ದೇವೆ. ಇದರ ಹಿಂದೆ ಏನಾದರೂ ಒಂದು ಜಾಲವಿರಲೇಬೇಕು. ಅದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಸರ್ಕಾರವನ್ನು ಕೇಳುತ್ತೇನೆ. ಅಥವಾ ಈಗ ನಡೆದಿರುವ ಇಂಥಹ ದಾರುಣ ಘಟನೆಯ ಹಿನ್ನಲೆಯಲ್ಲಿ ಈಗಾಗಲೆ ನಿಜವಾಗಿ ಇಲ್ಲಿ ಸರ್ಕಾರವೇ ಸುವೊಮೋಟು ಹೇಳಿಕೆಯನ್ನು ಕೊಡಬೇಕಾಗಿತ್ತು, ಆದರೆ ಕೊಟ್ಟಿಲ್ಲ. ಆದುದರಿಂದ, ಈ ಬಗ್ಗೆ ಸಮಗ್ರವಾದ ತನಿಖೆಯಾಗಬೇಕು. ಈಗ ತಕ್ಷಣ ಸರ್ಕಾರವೇನು ಕ್ರಮವನ್ನು ತೆಗೆದುಕೊಂಡಿದೆ, ಈ ಬಗ್ಗೆ ಯಾರನ್ನಾದರೂ ಅರೆಸ್ಟ್ ಮಾಡಲಾಗಿದೆಯೆ, ಏನು ಕ್ರಮ ತೆಗೆದುಕೊಂಡಿದೆ, ಈ ಬಗ್ಗೆ ತನಿಖೆಯಾಗಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಡಾ.ಕೆ.ಅನ್ನದಾನಿ: ಇನ್ನೊಂದು ಕಡೆ ಪೊಲೀಸ್‌ನವರು ಇದು ಭ್ರೂಣವೆಂದು ರುಜುವಾತಾಗಿಲ್ಲವೆಂದು ಹೇಳಿದ್ದಾರೆ.

ಶ್ರೀ ಎ.ಎಸ್. ಬಸವರಾಜು: ಅಧ್ಯಕ್ಷರೆ, ಶ್ರೀರಾಮರೆಡ್ಡಿಯವರು ಬ್ರಹ್ಮಚಾರಿಗಳು, ಇವರು ಇದರ ಬಗ್ಗೆ ಏತಕ್ಕೆ ಚಿಂತೆ ಮಾಡುತ್ತಿದ್ದಾರೊ ಗೊತ್ತಿಲ್ಲ.

ಮಾನ್ಯ ಸದಸ್ಯರೊಬ್ಬರು: ಮಾನ್ಯ ಅಧ್ಯಕ್ಷರೆ, ಎಲ್ಲರ ಸಲುವಾಗಿ ಕೆಲಸ ಮಾಡುವ ನಮ್ಮ ಬ್ರಹ್ಮಚಾರಿಗಳಿಗೆಲ್ಲಾ ಇರುತ್ತದೆ, ಬ್ರಹ್ಮಚಾರಿಗಳ ಬಗ್ಗೆ ಮಾನ್ಯ ಸದಸ್ಯರು ಈ ರೀತಿ ಮಾತನಾಡಬಾರದು, ಏಕೆಂದರೆ ಫ್ಯಾಮಿಲಿಯವರು ಏನೇನು ಮಾಡುತ್ತಾರೆಂದು ದೇವರಿಗೆ ಗೊತ್ತು. '

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಇಂಥ ಗಂಭೀರವಾದ ವಿಚಾರವನ್ನು ಪ್ರಸ್ತಾಪ ಮಾಡಿದರೆ ಲಘುವಾಗಿ ಮಾತನಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್: ಇಡೀ ರಾಜ್ಯ ತಲೆ ತಗ್ಗಿಸುವಂಥ ಗಂಭೀರವಾದ ವಿಚಾರ ಪ್ರಸ್ತಾಪ ಮಾಡಿದರೆ, ಈ ರೀತಿ ಹಾಸ್ಯವಾಗಿ ತೆಗೆದುಕೊಳ್ಳುವ ವಿಚಾರವಲ್ಲ.

ಶ್ರೀಮತಿ ಶಕುಂತಲ ಶೆಟ್ಟಿ: ಮಾನ್ಯ ಅಧ್ಯಕ್ಷರೆ, ಬಹುಶಃ ಬೆಂಗಳೂರಿನ ಹೃದಯ ಭಾಗದಲ್ಲಿ ಒಂದೇ ದಿನದಲ್ಲಿ 21 ಭ್ರೂಣ ಹತ್ಯೆ ನಡೆದಿದೆ ಎಂದರೆ ಇದು ಅಮಾನವೀಯ ಕೃತ್ಯವೆಂದು ನಾವೆಲ್ಲರೂ ಹೇಳಬೇಕಾಗುತ್ತದೆ. ಅದರಲ್ಲೂ ಇಲ್ಲಿಯವರೆಗೆ ನಾವು ಕಂಡಂತೆ, ಎಲ್ಲಾ ಕಡೆ ಹೆಣ್ಣು ಭ್ರೂಣ ಹತ್ಯೆ ಕಾಣುತ್ತಿತ್ತು. ಬಹುಶಃ ನನಗನಿಸುತ್ತದೆ, ಹೆಣ್ಣು ಮಕ್ಕಳನ್ನು ಬದುಕುವುದಕ್ಕೆ ಬಿಡಿ ಎಂದು ಇನ್ನೊಂದು ಜಾಥಾ ಹೊರಡಬೇಕೆಂದು ಕಾಣಿಸುತ್ತಿದೆ. ಅಥವಾ ಅಕ್ರಮವಾಗಿ ಇಂಥ ಭ್ರೂಣ ಹತ್ಯೆ ನಡೆದಿರಬಹುದು. ಇಂಥ ಕಾನೂನು ಬಾಹಿರ ಕೆಲಸ ಮಾಡಿದ ಆ ಆಸ್ಪತ್ರೆ ಮತ್ತು ಆ ವೈದ್ಯಾಧಿಕಾರಿಗಳ ಮೇಲೆ ತಕ್ಷಣ ಶಿಸ್ತು ಕ್ರಮ ಕೈಗೊಳ್ಳಬೇಕು, ಮುಂದೆ ಈ ರೀತಿ ಎಲ್ಲೂ ನಡೆಯದ ಹಾಗೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರಲ್ಲಿ ಮಹಿಳೆ ಎರಡೂ ಕಡೆಯಿಂದ ಬಲಿಯಾಗುತ್ತಿದ್ದಾಳೆ, ಹೆಣ್ಣು ಭ್ರೂಣ ಹತ್ಯೆಯು ನಡೆಯುತ್ತಿದೆ, ಹೆಣ್ಣಿನ ಗರ್ಭದಿಂದಲೇ ಆ ಭ್ರೂಣ ಹತ್ಯೆಯನ್ನು ಮಾಡುತ್ತಿದ್ದಾರೆಂದರೆ, ಹೆಣ್ಣು ಈ ಸಮಾಜಕ್ಕೆ ಕಣ್ಣಾಗುವ ಬದಲು, ಹೆಣ್ಣು

ಸಮಾಜಕ್ಕೆ ಹುಣ್ಣಾಗುತ್ತಿದ್ದಾಳೆಯೇ ಎಂದು ನಾವು ಭಾವಿಸಬೇಕಾಗಿದೆ. ಈ ಭಾರತದ ಸಮಾಜದಲ್ಲಿ ಹೆಣ್ಣಿಗೆ ಬಹಳ ಗೌರವದ ಹಾಗೂ ಪೂಜ್ಯ ಸ್ಥಾನವಿತ್ತು. ಇವತ್ತು ಭ್ರೂಣದಲ್ಲೇ ಹತ್ಯೆಯಾಗುವ ಕಾಲ ಬಂದಿದೆ. ಎನ್ನುವಾಗ ಬಹಳ ನೋವಾಗುತ್ತದೆ. ಇದರ ಹಿಂದಿರುವ ಎಲ್ಲವನ್ನು ಹೊರಗೆ ಹಾಕುವ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಡಾ.ಕೆ.ಅನ್ನದಾನಿ: ಅಧ್ಯಕ್ಷರೆ, ಒಂದು ನಿಮಿಷ ಕಾಲಾವಕಾಶ ಕೊಡಬೇಕು.

ಅಧ್ಯಕ್ಷರು: ಅನ್ನದಾನಿಯವರೆ, ಉಪ ಪ್ರಶ್ನೆ ತರಹ ಇಲ್ಲಿ ಕೇಳುವುದಕ್ಕೆ ಬರುವುದಿಲ್ಲ.

ಡಾ.ಕೆ.ಅನ್ನದಾನಿ: ಒಂದೇ ನಿಮಿಷದಲ್ಲಿ ಮುಗಿಸುತ್ತೇನೆ, ನಮ್ಮ ಹಿರಿಯ ಸದಸ್ಯರಾದ ಶ್ರೀರಾಮರೆಡ್ಡಿಯವರು ಹಾಗೂ ಅಕ್ಕನವರಾದ ಶ್ರೀಮತಿ ಶಕುಂತಲಾ ಶೆಟ್ಟಿಯವರು ಇಲ್ಲಿ ಒಂದು ಒಳ್ಳೆಯ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ, ಈ ವಿಚಾರವನ್ನು ಈ ಸದನದಲ್ಲಿ ಯಾರೂ ಕೂಡ ಲಘುವಾಗಿ ಸ್ವೀಕಾರ ಮಾಡುವುದು ಬೇಡ, ಇದು ಬಹಳ ಗಂಭೀರವಾದ ವಿಚಾರ. 20–25 ಭ್ರೂಣಗಳೆಂದರೆ, ಅದು ಒಂದೇ ಆಸ್ಪತ್ರೆಯಲ್ಲಿ ಅಥವಾ ಒಂದೇ ನರ್ಸಿಂಗ್ ಹೋಂನಲ್ಲಿ ಅಥವಾ ಕ್ಲಿನಿಕ್‌ನಲ್ಲಿ ದೊರೆತಿವೆ. ಹೊರಗಡೆಯವರು 20–25 ಭ್ರೂಣವನ್ನು ಚೀಲದಲ್ಲಿ ಕಟ್ಟಿ ಹೊರಗಡೆ ಕಸದ ರಾಶಿಯಲ್ಲಿ ಬಿಸಾಡುವ ವ್ಯವಸ್ಥೆ ಇದೆ ಎಂದರೆ, ಇದು ಬಹಳ ಪ್ರೀಪ್ಲಾನ್ ಆಗಿ ನಡೆದಿರುವ ಕೃತ್ಯ, ಈ ರೀತಿ ಆಗಬಾರದು. ಅದು ಹೆಣ್ಣಾಗಲಿ, ಗಂಡಾಗಲಿ, ಮುಂದೆ ಒಂದು ದಿನ ನಾವು ವಧು ದಕ್ಷಿಣೆ ಕೊಟ್ಟು ಮದುವೆ ಮಾಡಿಕೊಳ್ಳಬೇಕಾದ ಪರಿಸ್ಥಿತಿ ಬರಬಹುದು ಎಂದು ಚಿಂತನೆ ಆಗಿದೆ.

ಅಧ್ಯಕ್ಷರು: ಅವರು ಉತ್ತರ ಹೇಳುತ್ತಾರೆ. ಇನ್ನು ಅನೇಕ ವಿಚಾರಗಳಿವೆ.

ಡಾ.ಕೆ.ಅನ್ನದಾನಿ: ಇದು ಬಹಳ ಖಂಡನೀಯ ಇದು ಆಗಬಾರದು, ಇದರಲ್ಲಿ ಎಷ್ಟು ನರ್ಸಿಂಗ್ ಹೋಮ್‌ಗಳು, ಎಷ್ಟು ಆಸ್ಪತ್ರೆಗಳು, ಇದರಲ್ಲಿ involve ಆಗಿವೆ, ಇದರ ಬಗ್ಗೆ ಹೆಚ್ಚಿನ ತನಿಖೆ ನಡೆಸಿ, ಅವರ ಮೇಲೆ

ಕಾನೂನು ಪ್ರಕಾರ ಉಗ್ರವಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿ ಈ ಸದನದ ಮುಖಾಂತರ ತಮ್ಮನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಬಿ.ಎಸ್.ಹೊರಟ್ಟಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀರಾಮರೆಡ್ಡಿಯವರು ಮತ್ತು ಅನ್ನದಾನಿಯವರು...

ಶ್ರೀಮತಿ ಸುನೀತ ವೀರಪ್ಪಗೌಡ: ಮಾನ್ಯ ಅಧ್ಯಕ್ಷರೆ, ಇಂತಹ ಅನೇಕ ವಿಚಾರಗಳು ಈ ಸದನದಲ್ಲಿ ಬಂದು ಹೋಗುತ್ತಿವೆ. ಆದರೆ ಇದುವರೆಗೆ ಯಾರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದಾರೆ, ಏನೂ ಕ್ರಮ ತೆಗೆದುಕೊಂಡಿಲ್ಲ, ಇವತ್ತು ಮಾತನಾಡುತ್ತೇವೆ, ನಾಳೆ ಮರೆಯುತ್ತೇವೆ. ಮರೆತು ನಾವು ಅಧಿಕಾರಿಗಳಿಗೆ ಸಪೋರ್ಟ್ ಮಾಡುತ್ತೇವೆ. ಏನು ಮಾಡುತ್ತೀರಿ ಎಂದು ನಾಳೆ ಸದನದಲ್ಲಿ ತಿಳಿಸಬೇಕು.

ಶ್ರೀ ಗೋಪಾಲಕೃಷ್ಣ ಬೇಳೂರು: ಮಾನ್ಯ ಅಧ್ಯಕ್ಷರೆ, ಭಿಕ್ಷಾಟನೆ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೆ, ಅದರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ.

ಅಧ್ಯಕ್ಷರು: ಯಾರು ಪ್ರಸ್ತಾಪ ಮಾಡುತ್ತಾರೆ, ಅದಕ್ಕೆ ಉತ್ತರ ಕೊಡುತ್ತಾರೆ. ಪ್ರಶ್ನೋತ್ತರ ವೇಳೆ ತರಹ ಶೂನ್ಯ ವೇಳೆಯಲ್ಲಿ ಕೇಳುವುದಕ್ಕೆ ಆರಂಭ ಮಾಡಿದ್ದೀರಿ.

ಶ್ರೀ ಬಿ.ಎಸ್.ಹೊರಟ್ಟಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀರಾಮರೆಡ್ಡಿಯವರು, ಶ್ರೀಮತಿ ಶಕುಂತಲ ಶೆಟ್ಟಿಯವರು, ಶ್ರೀಮತಿ ಸುನೀತಾ ವೀರಪ್ಪಗೌಡರು ಮತ್ತು ಡಾ.ಕೆ.ಅನ್ನದಾನಿಯವರು ಪ್ರಮುಖವಾದ ವಿಷಯಗಳನ್ನು ಕೇಳಿದ್ದಾರೆ. ಇದು ಈಗಾಗಲೇ ಎಲ್ಲಾ ಪತ್ರಿಕೆಗಳಲ್ಲಿ ಬಂದಿದೆ. ಇದು ಬಹಳ ಗಂಭೀರವಾದ ವಿಷಯ. ಸದರಿ ವಿಷಯದ ಬಗ್ಗೆ ಸಂಪೂರ್ಣವಾದ ರೀತಿಯಲ್ಲಿ ನಿರ್ಧಾರವನ್ನು ತೆಗೆದುಕೊಳ್ಳುವ ಬಗ್ಗೆ ಮಾನ್ಯ ಸಚಿವರು ಪ್ರಸ್ತಾಪ ಮಾಡುತ್ತಾರೆ. ನಾಳೆ ಪ್ರಥಮ ಅವಧಿಗೆ ಅಧಿವೇಶನ ಪ್ರಾರಂಭವಾದ ಕ್ಷಣಕ್ಕೆ ಸಂಪೂರ್ಣವಾದ ಮಾಹಿತಿಯನ್ನು ಒದಗಿಸುತ್ತೇವೆ. ಏಕೆಂದರೆ ಇದು ಕೇವಲ ಇಲ್ಲಿ ಮಾತ್ರವಲ್ಲ, ಎಲ್ಲಾ ಕಡೆಗಳಲ್ಲೂ ಆಗಿದೆ, ಇಡೀ ಬೆಂಗಳೂರು ತುಂಬ ಎಲ್ಲೆಲ್ಲಿ ಆಗಿದೆ ಎನ್ನುವುದನ್ನು ನೋಡಬೇಕಾಗಿದೆ. ಇವತ್ತಿನ ಪರಿಸ್ಥಿತಿ ಬಗ್ಗೆ ಅಧಿಕಾರಿಗಳು ಚರ್ಚೆ ಮಾಡುತ್ತಾರೆ. ಸಂಪೂರ್ಣವಾದ ಮಾಹಿತಿಯನ್ನು

ಮತ್ತು ಕ್ರಮವನ್ನು ನಾಳೆ ಅಧಿವೇಶನ ಪ್ರಾರಂಭವಾದ ತಕ್ಷಣ ಸರ್ಕಾರ ಉತ್ತರ ಕೊಡುತ್ತದೆ.

(8) ವಿಷಯ: ಇಡೀ ರಾಜ್ಯದಲ್ಲಿ APMC ಬಂದ್ ಮಾಡಿರುವುದರಿಂದ ರಾಜ್ಯದ ಜನರಿಗೆ ತೊಂದರೆಯಾಗಿರುವ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ): ಮಾನ್ಯ ಅಧ್ಯಕ್ಷರೆ, ಸುಮಾರು ಐದು ದಿವಸಗಳಿಂದ APMC ಯವರು ಇಡೀ ರಾಜ್ಯದಲ್ಲಿ ಸಂಪೂರ್ಣವಾಗಿ ಬಂದ್ ಮಾಡಿದ್ದಾರೆ. ನಮ್ಮ ಈ ಸದನ ಏನು ಮಸೂದೆಯನ್ನು ತಂದಿತ್ತು, ಈ ಮಸೂದೆಯಿಂದ ರೈತರ ಹಿತಕ್ಕೆ ಭಂಗವಾಗಿದೆ. ಇವತ್ತು APMC ಗಳಿಗೆ ಭಂಗವಾಗಿದೆ. ಇಡೀ ರಾಜ್ಯದಾದ್ಯಂತ ಎಲ್ಲರೂ ಸಂಪೂರ್ಣವಾಗಿ ಬಂದ್ ಆಚರಣೆ ಮಾಡಿದ್ದಾರೆ. ಬಂದ್‌ನಿಂದ ವ್ಯಾಪಾರಸ್ಥರಿಗೆ ತೊಂದರೆಯಾಗಿದೆ. 15,000ಕ್ಕೂ ಹೆಚ್ಚು ಕೆಲಸಗಾರರು ಬೀದಿ ಪಾಲಾಗಿದ್ದಾರೆ. ಎಲ್ಲಕ್ಕಿಂತ ಹೆಚ್ಚಾಗಿ ತರಕಾರಿ ಬೆಲೆ, ಹಣ್ಣಿನ ಬೆಲೆ ಎಲ್ಲಾ ರೀತಿಯ ಬೆಲೆಗಳು ಹೆಚ್ಚಾಗಿವೆ. ಇದರ ಬಗ್ಗೆ ಸರ್ಕಾರ ಏನೂ ಗಮನ ಕೊಟ್ಟಿಲ್ಲ. ಐದು ದಿವಸಗಳಿಂದ ಮುಷ್ಕರ ನಡೆಯುತ್ತಿದೆ. ಅವರನ್ನು ಕರೆದು ಮಾತುಕತೆ ಮಾಡಬೇಕು, ಕರೆಯಬೇಕು, ಅವರ ಮುಂದಿನ ಮಾರ್ಗ ಏನು? ಏನು ಮಾಡುತ್ತಾರೆಂದು ಅವರು ಹೇಳಲಿಲ್ಲ. ಅವರ ಬಗ್ಗೆ ವಿಚಾರವೇ ಇಲ್ಲ. ಯಾರನ್ನೂ ಕರೆದಿಲ್ಲ. ಮಾತುಕತೆ ಆಡಿಲ್ಲ, ಇಡೀ ರಾಜ್ಯದಲ್ಲಿ ಸರ್ಕಾರವೇ ಒಂದು ರೀತಿ, APMC ಒಂದು ರೀತಿ, ಒಂದು ಕಡೆ ಮರಳು ಲಾರಿಗಳ ಸತ್ಯಾಗ್ರಹ, ಏನಿದು? ಸರ್ಕಾರ ಇದೆಯೇ, ಏನಾಗಿದೆ, ಮಾನ್ಯ ಮುಖ್ಯ ಮಂತ್ರಿಗಳು ದೆಹಲಿಗೆ ಹೋಗಿದ್ದಾರೆ, ಸಂಬಂಧಪಟ್ಟ ಸಚಿವರು ಇಲ್ಲಿ ಇಲ್ಲ. ಏನೋ ಒಂದು ತರಹ ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಿದ್ದಾರೆ. ದಯಮಾಡಿ ಇದರ ಬಗ್ಗೆ ಹೇಳುವುದಕ್ಕೆ ಸರ್ಕಾರದವರು ಯಾರಿದ್ದಾರೆ? ಬಂದನ್ನು ನಿಲ್ಲಿಸಿ ಸರ್ಕಾರ ಅವರನ್ನು ಕರೆದು ಮಾತುಕತೆ ಮಾಡಬೇಕು.

ಅಧ್ಯಕ್ಷರು: ಇದರ ಬಗ್ಗೆ ಯಾರು ಉತ್ತರ ಕೊಡುತ್ತೀರಿ? APMC ಮುಷ್ಕರದ ಬಗ್ಗೆ ಯಾರಾದರೂ ಉತ್ತರ ಕೊಡಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ವಾಟಾಳ್ ನಾಗರಾಜ್‌ರವರು ಏನು ಹೇಳಿದರು ಎಂದು ಯಾರೂ ಗಮನಿಸಲಿಲ್ಲ.